ನಿವೃತ್ತಿ ವೇತನ ಕುರಿತು

1739 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೇತನ ಹಾಗೂ ಭತ್ಯೆಗಳನ್ನು ಹೆಚ್ಚಿಸಿದಾಗ ಕೆಲಸದಲ್ಲಿರುವವರಿಗೆ ಮೊದಲು, ನಿವೃತ್ತಿಯಾದವರಿಗೆ ನಂತರ ಸರ್ಕಾರಿ ಆಜ್ಞೆಗಳನ್ನು ಹೊರಡಿಸುವ ಬದಲು, ಎರಡನ್ನೂ ಒಂದೇ ಆದೇಶದಲ್ಲಿ ಹೊರಡಿಸಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ಸರ್ಕಾರಿ ನೌಕರರ ವೇತನ, ಮತ್ತು ಭತ್ಯೆ ಮತ್ತು ನಿವೃತ್ತಿ ವೇತನದಾರರ ಪಿಂಚಣಿ ಮತ್ತು ಭತ್ಯೆ ಕುರಿತು ಪ್ರತ್ಯೇಕವಾದ ನಿಯಮಾವಳಿಗಳಿದ್ದು, ಇವುಗಳನ್ನು ಅವುಗಳಡಿಯಲ್ಲಿ ನಿರ್ವಹಿಸಲಾಗುತ್ತಿದೆ. ಪಿಂಚಣಿದಾರರ ನಿವೃತ್ತಿ ವೇತನದ ಪರಿಷ್ಕರಣೆ ಅಥವಾ ಹೆಚ್ಚಳ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳ ಪರಿಷ್ಕರಣೆ ಮೇಲೆ ಅವಲಂಬಿಸಿರುವುದರಿಂದ ಅಂದರೆ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳ ಪರಿಷ್ಕರಣೆಯ ಆಧಾರದ ಮೇಲೆ ಪರಿಶೀಲಿಸಿ ನಿರ್ಧರಿಸಲಾಗುವುದರಿಂದ ಪ್ರತ್ಯೇಕವಾದ ಆದೇಶವನ್ನು ಹೊರಡಿಸಲಾಗುತ್ತಿದೆ. ಆದಾಗ್ಯೂ ತುಟ್ಟಿ ಭತ್ಯೆಯಲ್ಲಿನ ಹೆಚ್ಚಳದ ಬಗ್ಗೆ ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ಆದೇಶವನ್ನು ಹೊರಡಿಸಿದ ತಕ್ಷಣವೇ ಪಿಂಚಣಿದಾರರಿಗೆ ಸಂಬಂಧಿಸಿದಂತೆ ಆದೇಶವನ್ನು ಹೊರಡಿಸಲಾಗುತ್ತಿದೆ.

ನಿವೃತ್ತ ನೌಕರರಿಗೆ ಪರಿಹಾರ

1740 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿ 1-1-1982 ರಿಂದ 30-6-93ರ ಅವಧಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ಸರ್ಕಾರಿ ನೌಕರರಿಗೆ ಶೇಕಡಾ 7.5 ಪರಿಹಾರ ಕೊಡಲಾಗಿದೆಯೇ?

ಆ) ಅವಧಿಯ ನಿವೃತ್ತ ನೌಕರರಿಗೆ ಇನ್ನುವರೆಗೆ 7.5 ಶೇಕಡಾ ಪರಿಹಾರ ಕೊಡದೆ ಇರುವುದು ನಿಜವಲ್ಲವೇ? ಅದಕ್ಕೆ ಕಾರಣವೇನು?

ಇ) ಶೇಕಡಾ 7.5 ಪರಿಹಾರ ಕೊಡಲು ಕೂಡಲೆ ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ರಾಜ್ಯ ಸರ್ಕಾರವು ದಿನಾಂಕ 1-1-82 ರಿಂದ 30-6-93 ಅವಧಿಯಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ತಾತ್ಕಾಲಿಕ ಪರಿಹಾರವನ್ನು ಈ ಕೆಳಕಂಡಂತೆ ಮಂಜೂರು ಮಾಡಿದೆ.

ಅ) 1. ಸರ್ಕಾರಿ ಆದಶ ಸಂಖ್ಯೆ : ಎಫ್‌ಡಿ 36 ಎಸ್‌ಆರ್‌ಡಿ 85 ದಿ. 27-7-85ರಲ್ಲಿ ತಿಂಗಳಿಗೆ ಕನಿಷ್ಟ ರೂ. 50-00 ಗರಿಷ್ಟ ರೂ. 240-00ಕ್ಕೆ ದಿ.1-8-85 ರಿಂದ ಮೂಲ ವೇತನದ ಶೇಕಡಾ 7.5 ರಷ್ಟು.

2. ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 54 ಎಸ್‌ಆರ್‌ಡಿ 86, ದಿ.18-6-86ರಲ್ಲಿ ತಿಂಗಳಿಗೆ ಕನಿಷ್ಟ ರೂ. 35-00 ಗರಿಷ್ಟ ರೂ. 85-00 ರಂತೆ ದಿ. 1-6-86 ರಿಂದ ಮೂಲ ವೇತನದ ಶೇಕಡಾ 3ರಷ್ಟು

3. ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 36 ಎಸ್‌ಆರ್‌ಡಿ 32 ದಿ.16-10-92 ರಲ್ಲಿ ತಿಂಗಳಿಗೆ ಕನಿಷ್ಟ ರೂ. 60-00 ಮತ್ತು ಗರಿಷ್ಟ ರೂ. 200-00 ದಿ. 1-6-92 ರಿಂದ ಮೂಲ ವೇತನದ ಶೇಕಡಾ 5ರಷ್ಟು.

ಇ) ರಾಜ್ಯ 3ನೇ ವೇತನ ಆಯೋಗ ಹಾಗೂ ರಾಜ್ಯ 4ನೆ ವೇತನ ಆಯೋಗಗಳು ದಿ.1-1-82 ರಿಂದ ದಿನಾಂಕ 36-6-93ರ ಅವಧಿಯಲ್ಲಿ ನಿವೃತ್ತರಾದ ಸರ್ಕಾರಿ ನೌಕರರಿಗೆ ಯಾವುದೇ ಪರಿಹಾರವನ್ನು ಶಿಫಾರಸ್ಸು ಮಾಡಿರುವುದಿಲ್ಲ. ಆದಾಗ್ಯೂ ರಾಜ್ಯ ಸರ್ಕಾರವು ದಿ. 19-7-85ಕ್ಕಿಂತ ಮೊದಲು ನಿವೃತ್ತರಾದ ಸರ್ಕಾರಿ ನೌಕರರಿಗೆ ಪಿಂಚಣಿ : ಕುಟುಂಬ ಪಿಂಚಣಿಯಲ್ಲಿ ಪರಿಹಾರ : ಪಿಂಚಣಿಯಲ್ಲಿ ಹೆಚ್ಚಳವನ್ನು ದಿ.1-7-87ರಿಂದ ಜಾರಿಗೆ ಬರುವಂತೆ ಗರಿಷ್ಟ ರೂ. 100-00ಕ್ಕೆ ಒಳಪಟ್ಟಂತೆ ರೂ. 675-00ಕ್ಕಿಂತ ಕಡಿಮೆ ಪಿಂಚಣಿ ಪಡೆಯುತ್ತಿರುವವರಿಗೆ ಮೂಲ ಪಿಂಚಣಿಯ ಶೇಕಡಾ 5ರಷ್ಟು ಹಾಗೂ ರೂ. 675-00ಕ್ಕೂ ಹೆಚ್ಚು ಪಿಂಚಣಿ ಪಡೆಯುತ್ತಿರುವವರಿಗೆ ಮೂಲ ಪಿಂಚಣಿಯ ಶೇಕಡಾ $7^1/_2$ರಷ್ಟನ್ನು ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 20 ಎಸ್‌ಆರ್‌ಎಸ್ 87 (ii) ದಿ. 17-8-87ರಲ್ಲಿ ಮಂಜೂರು ಮಾಡಿದೆ. ಮುಂದುವರಿದು ರಾಜ್ಯ ಸರ್ಕಾರವು ಇತ್ತೀಚೆಗೆ ಪಿಂಚಣಿದಾರರಿಗೆ : ಕುಟುಂಬ ಪಿಂಚಣಿದಾರರಿಗೆ ಮೂಲ ಪಿಂಚಣಿಯ ಶೇಕಡಾ 20ರಷ್ಟು ತಾತ್ಕಾಲಿಕ ಪರಿಹಾರವನ್ನು ದಿ. 1-12-97ರಿಂದ ಜಾರಿಗೆ ಬರುವಂತೆ ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ (ವಿಶೇಷ) 01 ಪಿಇಟಿ 98, ದಿ. 9-1-98ರಲ್ಲಿ ಮಂಜೂರು ಮಾಡಿದೆ.

ಹಿರೇಕೆರೂರು ತಾಲ್ಲೂಕಿನಲ್ಲಿ ಪಶು ಸಂಗೋಪನಾ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು

1741 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು?

ಆ) ಈ ಹುದ್ದೆಗಳನ್ನು ತುಂಬಲು ಸರ್ಕಾರವು ಯಾವ ಕ್ರಮ ಕೈಗೊಳ್ಳಲಾಗಿದೆ?